they have any plan for taking up the repairs of these tanks" ಎಂದು ಕೇಳಿರುವುದಕ್ಕೆ ಉತ್ತರವಾಗಿ "Yes" ಎಂದು ಹೇಳಿದ್ದೀರಿ. ಅದಕ್ಕೆ ಪ್ಲಾನುಯಾವುದು?

ಶ್ರೀ ಟಿ. ಮರಿಯಪ್ಪನವರು.—ಅದೆಲ್ಲಾ ಪ್ಲಾನಿನಲ್ಲಿ ಸೇರಿಸಿದೆ. ಕೆಲಸಗಾರರು ಸಿಕ್ಕಿದರೆ ಹೆಚ್ಚು ಕೆಲಸ ನಡೆಯಬಹುದು, ಅದರ ಮೇಲೆ ಹೋಗುತ್ತದೆ. ಆ ತಾಲ್ಲೂಕಿನಲ್ಲಿ ಇಷ್ಟು ತೆಗೆದುಕೊಳ್ಳಬೇಕೆಂದು ನಿಗದಿ ಮಾಡಿದೆ. ಅಲ್ಲಿನ ಸಂದರ್ಭ ಮತ್ತು ಅನುಕೂಲತೆಗಳನ್ನು ನೋಡಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ತುರುವೇಕೆರೆಯಲ್ಲಿ ಕೂಲಿಗಾರರು ಸಿಕ್ಕುವುದು ಕಷ್ಟವೆ?

ಶ್ರೀ ಟಿ. ಮರಿಯಪ್ಪನವರು.—ಮಳೆಗಾಲದಲ್ಲಿ ವ್ಯವಸಾಯದ ಕಾಲದಲ್ಲಿ ಕೂಲಿಸಿಕ್ಕುವುದಿಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಜೂನ್ ಅಖೈರಿನಲ್ಲಿ ಎಷ್ಟಾಗುತ್ತದೆ, ಜಾಗ್ರತೆ ಮಂಜೂರು ಮಾಡುವುದಕ್ಕೆ ಯಾವ ಪ್ಲಾನ್ ಇದೆ? ಪ್ಲಾನ್ ಅಂದರೆ ಜಾಗ್ರತೆ ಆಗುವುದಕ್ಕೆ ಏನೇನು ಮಾಡುತ್ತೀರಿ?

ಶ್ರೀ ಟಿ. ಮರಿಯಪ್ಪನವರು.—ಮೊದಲು ಇಷ್ಟು ಕೆಲಸವಾಗಬೇಕೆಂದು ತೀರ್ಮಾನ ಮಾಡುವುದಕ್ಕೆ ಅಂದಾಜು ಬಂದು ಅದು ಪರಿಶೀಲನೆಯಾಗಿ ಆ ಮೇಲೆ ಮಂಜೂರಾಗಬೇಕು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ರೆವೆನ್ಯೂ ಇಲಾಖೆಯಿಂದ ಬರುವುದು ನಿಧಾನವಾಗುವುದರಿಂದ ಮಂಜೂರಾತಿಯೂ ನಿಧಾನವಾಗುತ್ತದೆಯೆಂದು ಹೇಳಬಹುದೇ?

ಶ್ರೀ ಟಿ. ಮರಿಯಪ್ಪನವರು.—ಈಗಿರುವ ಕಾನೂನು ಪ್ರಕಾರ ರೆವೆನ್ಯೂ ಇಲಾಖೆಯಲ್ಲಿ ಪ್ರತ್ಯೇಕವಾಗಿ ಪರಿಶೀಲನೆಯಾಗಬೇಕು. ಕ್ಷೇತ್ರಾಗದ ರೈತರು ಮುಚ್ಚಳಿಕೆ ಬರೆದು ಕೊಡಬೇಕೆಂದಿದ್ದರೆ ಅದೂ ಆಗಬೇಕು. ಅದಾಗ್ಯೂ ಸಾಧ್ಯವಾದಷ್ಟು ಬೇಗ ಆಗುವ ಹಾಗೆ ಕಾರ್ಯಕ್ರಮ ಕೈಗೊಂಡಿದ್ದೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಟಿ. ಮರಿಯಪ್ಪನವರು.—ತಿಳಿವಳಿಕೆ ಕೊಟ್ಟಿದೆ. ಆದಷ್ಟು ಬೇಗ ಮಾಡಬೇಕೆಂದು ಹೇಳಿದೆ. ಸಾಲದ್ದಕ್ಕೆ ಪ್ರತಿಯೊಂದು ತಾಲ್ಲೂಕಿಗೂ ಗ್ರಾಜುಯೇಟ್‌ಸರ್ವೇಯರನ್ನು ಕೊಟ್ಟಿದೆ. ಎರಡು ಹೋಬಳಿಗೆ ಒಬ್ಬ ಸಬ್ ಓವರ್‌ಸಿಯರನ್ನು ಕೊಟ್ಟಿದೆ, ಸಿಬ್ಬಂದಿಸಹ ಸಾಕಷ್ಟಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಮುಚ್ಚಳಿಕೆ ಕೆಲಸದಿಂದ ನಿಧಾನವಾಗಿದೆಯಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಇತ್ತೀಚೆಗೆ ನೀರಾವರಿ ಕೆಲಸಗಳ ವಿಚಾರದಲ್ಲಿ ಜಾಗ್ರತೆ ಕೆಲಸಗಳು ಜರುಗುವಂತೆ ಕ್ರಮ ಕೈಕೊಳ್ಳಬೇಕು ಎಂದು ರೆವೆನ್ಯೂ ಕಮಿಷನರಿಗೆ ಸೂಚನೆ ಕೊಟ್ಟಿದೆ.

Sri A. BHEEMAPPA NAIK (Chitaldrug District—General).—Is desilting an item of minor tank restoration?

Sri T. MARIAPPA.—Yes.

Sri A. BHEEMAPPA NAIK.—Are the Government of India giving any grants for desilting these tanks?

Sri T. MARIAPPA.—Yes. The Government of India have been pleased to give us grants for the purpose during 1949-50.

Sri A. BHEEMAPPA NAIK.—How much is it?

Sri T. MARIAPPA.—About Rs. 5 lakhs.

Sri A. BHEEMAPPA NAIK.—Will not desilting be done more effectively with the help of bulldozers?

Sri T. MARIAPPA.—It is obvious. Bulldozer and tractor excavation will be more helpful, because they are mechanised.

Sri A. BHEEMAPPA NAIK.—Will not the cost be almost a fourth of that of manual labour?

Sri T. MARIAPPA.—That is a matter of opinion. It depends upon each tank and the quantity of silt to be removed.

Sri A. BHEEMAPPA NAIK.—What is the cost of desilting by bulldozers? It has to be worked out and it is not a matter of opinion.

Mr. SPEAKER.—The Hon'ble Member is discussing the question.

Sri A. BHEEMAPPA NAIK.—I am asking what the cost of desilting is per cubic yard?

Sri T. MARIAPPA.—Notice.

Sri A. BHEEMAPPA NAIK.—Will the Government be pleased to state whether they will make use of these bulldozers for desilting?

Sri T. MARIAPPA.—They are already being made use of.

Sri A. BHEEMAPPA NAIK.—Where?

Sri T. MARIAPPA.—That does not arise out of the question relating to Turuvekere Tank.

Mr. SPEAKER.—Next question. No. 117.

Chillies Control Order and the hardships caused by it.

Q.—**117. Sri G. VEERAPPA** (Chitaldrug District—General).—

Will the Government be pleased to state:—

(*a*) whether they are aware that the Chillies Control Order has caused great hardship and dislocation of chillies trade in Davangere and consequently unrest among the merchants;

(*b*) whether they are aware that it is only the commodity that is grown outside Mysore and the commodity that is not consumed in Mysore that was being brought to Davangere market and therefrom sent to other places outside the State ;

(*c*) whether they are aware that the ban imposed on the export and import of chillies is unnecessary, at any rate so far as Davangere and Harihar Taluks are concerned ?

A.—**Sri T. MARIAPPA** (Home Minister).—

(*a*) Some representations in this behalf have been received by Government.

(*b*) No.

(*c*) This is a matter of opinion.

Sri G. VEERAPPA.—Were there any strong reasons for introducing this Chillies Control Order and if so may I know what they are?

*Sri T. MARIAPPA.—Government were informed that there was acute shortage of chillies.

Sri G. VEERAPPA.—Are the Government aware that in Davangere and Harihar the chillies market is dealing with only chillies imported from outside?

Sri T. MARIAPPA.—Dealing with chillies partly imported from outside.

Sri G. VEERAPPA.—Was any report called for from the Deputy Commissioner in the matter?

Sri T. MARIAPPA.—Yes.

Sri G. VEERAPPA.—Is it stated therein that the chillies sold in the Davangere market are only those imported from outside the State?

Sri T. MARIAPPA.—The report is to the effect that so far as raw chillies are concerned, most of them come from outside. Not the entire quantity of chillies.

Sri. G. VEERAPPA.—Was there any representation from the merchant class for the removal of the ban on account of the hardships caused to them?

Sri T. MARIAPPA.—Yes. In fact many have represented to the Government that the control order should be released so far as Davangere and Harihar are concerned.

Sri G. VEERAPPA.—Are the Government aware that after the control order was passed, the price of chillies has gone up abnormally?

Sri T. MARIAPPA.—This much is a fact that after the imposition of the ban the price has not fallen.

Sri G. VEERAPPA.—Are the Government aware that on account of this control order, a number of cases of smuggling of chillies outside the border have occurred?

Sri T. MARIAPPA.—No, Sir. We have taken every precaution to see that no smuggling takes place.

Sri G. VEERAPPA.—Will the Government consider the question of exempting the operation of chillies control order in respect of Davanagere and Harihar Taluks?

Sri T. MARIAPPA.—We will examine the question in the light of further report from the local officers.

ಶ್ರೀ ಕೆ. ಎಚ್. ಮುದಿಯಪ್ಪನವರು(ಚಿಕ್ಕಮಗಳೂರು ಜಿಲ್ಲೆ).—ಮೆಣಸಿನಕಾಯಿ ಹತೋಟಿ ಮೈಸೂರು ದೇಶದ ಎಲ್ಲಾಕಡೆಯೂ ಜಾರಿಯಲ್ಲಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಕೆ. ಎಚ್. ಮುದಿಯಪ್ಪನವರು.—ದಾವಣಗೆರೆಯಿಂದಲ್ಲದೆ ಮೈಸೂರು ದೇಶದ ಇತರ ಎಲ್ಲ ಕಡೆಗಳಿಂದಲೂ ಈ ಹತೋಟಿಯನ್ನು ತೆಗೆಯಬೇಕೆಂದು ಅರಿಕೆಗಳು ಬಂದಿವೆಯೆ ?

ಶ್ರೀ ಟಿ. ಮರಿಯಪ್ಪನವರು.—ಬಾಕಿ ಎಲ್ಲಿಂದಲೂ ಬಂದಿಲ್ಲ, ಶಿವಮೊಗ್ಗದಿಂದ ಮಾತ್ರ ಬಂದಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈ ಹತೋಟಿ ಜಾರಿಯಲ್ಲಿರುವುದರಿಂದ ಮೆಣಸಿನಕಾಯಿ ಬೆಳೆಯುವ ರೈತರಿಗೆ ತೊಂದರೆಯಲ್ಲವೆ ?

ಶ್ರೀ ಟಿ. ಮರಿಯಪ್ಪನವರು.—ಈ ಹತೋಟಿಹಾಕಿದ ಮೇಲೂ ಮೆಣಸಿನಕಾಯಿ ಬೆಲೆ ಬಿದ್ದುಹೋಗಿಲ್ಲವೆಂದು ನಾನು ಮೊದಲೇ ಹೇಳಿದ್ದೇನೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಕಡೂರಿನಲ್ಲಿ ಅನೇಕರು ಹಣಬರಬಹುದೆಂದು ಮೆಣಸಿನಕಾಯಿ ಬೆಳೆದರು..... .....

Mr. SPEAKER.—Hon'ble Member is making a statement. If he wants any information, he may ask for the same.

ಶ್ರೀ ಕೆ. ಎಚ್. ಮುದಿಯಪ್ಪನವರು.—ಮೆಣಸಿನಕಾಯಿಬೆಳೆಯತಕ್ಕ ಪ್ರದೇಶಗಳಲ್ಲಿ ಕಡೂರು ತಾಲ್ಲೂಕು ಒಂದಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ರೈತರು ಎಲ್ಲ ಕಡೆಯೂ ಮೆಣಸಿನಕಾಯಿ ಬೆಳೆಯುತ್ತಾರೆ.

ಶ್ರೀ ಕೆ. ಎಚ್ ಮುದಿಯಪ್ಪನವರು.—ಹಾಗಾದರೆ ದಾವಣಗೆರೆಗೆ ಮಾತ್ರ ಈ ಪ್ರತಿಬಂಧಕ ತೆಗೆಯುವಂತೆ ಅಭಿಪ್ರಾಯಪೇಕ್ಷಿಸಿದ್ದೀರಿ ?

ಶ್ರೀ ಟಿ. ಮರಿಯಪ್ಪನವರು.—ನಾನು ಹಾಗೆ ಹೇಳಲಿಲ್ಲ. ಪರಿಸ್ಥಿತಿಯನ್ನೂ ಅರಿಕೆಗಳನ್ನೂ ಈಗ ಮತ್ತೆ ರೆವ್ಯೂಮಾಡುತ್ತೇವೆಂದು ಹೇಳಿದೆ, ಅಷ್ಟೆ.

ಶ್ರೀ ಎಚ್. ಸಿದ್ಧವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಸಂಸ್ಥಾನದಲ್ಲಿ ಮೆಣಸಿನಕಾಯಿ ಬೆಳೆ ಎಷ್ಟು ಎಕರೆಯಲ್ಲಾಗುತ್ತಿದೆಯೆಂಬ ರೆಕ್ಕವಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಇಲ್ಲಿಲ್ಲ, ನೋಟೀಸ್ ಬೇಕು.

ಶ್ರೀ ಎಚ್. ಸಿದ್ಧವೀರಪ್ಪನವರು.—ನಮ್ಮ ಸಂಸ್ಥಾನ ಮೆಣಸಿನಕಾಯಿ ವಿಚಾರದಲ್ಲಿ surplus ಆಗಿದೆಯೋ ಅಥವಾ deficit ಆಗಿದೆಯೋ?

ಶ್ರೀ ಟಿ. ಮರಿಯಪ್ಪನವರು.—ನಮ್ಮಲ್ಲಿರುವ ಸಮಾಚಾರದ ಪ್ರಕಾರ deficit ಪ್ರದೇಶ.

ಶ್ರೀ ಎಚ್. ಸಿದ್ಧವೀರಪ್ಪನವರು.—ಅನೇಕರು ಹತೋಟಿ ಇಲ್ಲವೆಂದು ತಿಳಿದುಕೊಂಡು ಮೆಣಸಿನಕಾಯಿ ವ್ಯಾಪಾರವನ್ನು ಪ್ರಾರಂಭಮಾಡಿ, ಈ ಹತೋಟಿ ಹಾಕುವುದಕ್ಕಿಂತ ಮುಂಚೆ ಹೊರಗಿನ ವ್ಯಾಪಾರಿಗಳ ವರೊಡನೆ ಒಪ್ಪಂದ ಮಾಡಿಕೊಂಡು ತಾವು ಮೆಣಸಿನಕಾಯಿ ನರಬರಾಯಿ ಮಾಡುತ್ತೇವೆಂದು ಒಪ್ಪಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಅದು ನಮಗೆ ಗೊತ್ತಿಲ್ಲ, ಸರ್ಕಾರದಲ್ಲಿ ಈ ವಿಚಾರವನ್ನು ಅರಿಕೆ ಮಾಡಿಕೊಳ್ಳಲು ಬಂದಾಗ ವ್ಯಾಪಾರಸ್ಥರು ಕೆಲವರು ಹಾಗೆ ಹೇಳಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪನವರು.—ಹರಿಹರದ ಹತ್ತಿರ ಒಂದು ಕಡೆ ಮೆಣಸಿನಕಾಯಿಯನ್ನು ಶೇಖರಿಸಿಕೊಂಡು ವ್ಯಾಪಾರ ನಡೆಸುತ್ತಿರುವುದು ಗೊತ್ತಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಈ ರೀತಿ ಹೊರಗಡೆ ನಡೆಯುತ್ತಿದೆಯೆಂದು ವರ್ತಕರು ತಿಳಿಸಿದರು.

Sri H. M. CHANNABASAPPA (Mysore District—General).—Did the Government ascertain the stock position of chillies at the time of the introduction of this control order?

ಶ್ರೀ ಟಿ. ಮರಿಯಪ್ಪನವರು.—ಆಹಾರ ಇಲಾಖೆಯ ಡೈರೆಕ್ಟರವರು ಇರುವ ದಾಸ್ತಾನೆಲ್ಲಾ ಹೊರಗೆ ಹೋಗುತ್ತಿದೆ. ಇದನ್ನು ತಡೆಯಲು ಹತೋಟಿ ಹಾಕಬೇಕೆಂದು ಹೇಳಿದ್ದಾರೆ.

Sri H. M. CHANNABASAPPA.—My question is at the time of the introduction of this control order, were the Government informed of the stock position and the requirements of chillies in Mysore?

Sri T. MARIAPPA.—Yes. We have generally ascertained.

Sri H. M. CHANNABASAPPA.—What was the stock position?

Sri T. MARIAPPA.—Notice.

Sri H. M. CHANNABASAPPA.—What is the requirement so far as chillies are concerned?

Sri T. MARIAPPA.—Figures are not available here.

Sri H. M. CHANNABASAPPA.—Are Government aware that control orders are always associated with black-market and corruption?

Sri T. MARIAPPA.—I am not aware of it.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಹತೋಟಿ ಆಜ್ಞೆಮಾಡಿದ್ದು ಯಾವಾಗ?

Sri T. MARIAPPA.—I think it was in October. I will tell you the date very shortly.

ಶ್ರೀ ಎಸ್. ರಂಗರಾಮಯ್ಯನವರು.—ಹತೋಟಿ ಹಾಕಬೇಕೆಂದು ಎಷ್ಟು ಕಡೆಗಳಿಂದ ಅರಿಕೆಗಳು ಬಂದಿದ್ದುವು?

ಶ್ರೀ ಟಿ. ಮರಿಯಪ್ಪನವರು.—ಮೈಸೂರು, ಬೆಂಗಳೂರು, ತುಮಕೂರು ಮುಂತಾದ ನಾನಾ ಕಡೆಗಳಿಂದ ಬಂದಿತ್ತು.

ಶ್ರೀ ಎಸ್. ರಂಗರಾಮಯ್ಯನವರು.—ಈ ಹತೋಟಿ ಹಾಕಿದಾಗ ಮೈಸೂರು ಸಿಟಿಯಲ್ಲಿ ಎಷ್ಟು ದಾಸ್ತಾನಿತ್ತು?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಹತೋಟಿ ಮಾಡುವುದಕ್ಕಿಂತ ಮುಂಚೆ ಕೊಂಡುಕೊಂಡಿದ್ದವರು ಸಾಗಿಸಿಕೊಳ್ಳಲು ಅವಕಾಶ ಕೊಡದೆಯಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಅವಕಾಶ ಕೊಟ್ಟಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಆ ದಾಸ್ತಾನು ಏನಿದೆಯೋ ಅದನ್ನು ತಾವು bona fide ಯಾಗಿ ತೆಗೆದುಕೊಂಡಿದ್ದೇವೆ, ಅದನ್ನು ಸಾಗಿಸಲು ನಮಗೆ ಅವಕಾಶಕೊಡಬೇಕೆಂದು ಅವರಿಂದ ಅರಿಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಅಲ್ಲೇ ಮಾಂಬಾಗಿದಾಗ ಲೆಂದು ಈ ಹತೋಟಿ ಹಾಕಿರುವುದು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರದುರ್ಗ ಜಿಲ್ಲೆ).—ಹೊರಗಿನಿಂದ ಬರತಕ್ಕ ಮೆಣಸಿನಕಾಯಿಯನ್ನು ಮೈಸೂರು ಸಂಸ್ಥಾನದಲ್ಲಿ ಅಷ್ಟಾಗಿ ಉಪಯೋಗಿಸುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಅಲ್ಲಿಂದ ಬರುವ ಮೆಣಸಿನಕಾಯನ್ನು ವಿಶೇಷವಾಗಿ ಇಲ್ಲಿ ಉಪಯೋಗಿಸುವುದಿಲ್ಲವಾದರೂ ಅದೇ ಜಾತಿಯ ಕಾಯಿನ್ನು ಶಿವಮೊಗ್ಗದಲ್ಲಿ ಬೆಳೆಯುತ್ತಾರೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಹತೋಟಿ ಆಜ್ಞೆ ಮಾಡುವುದಕ್ಕಿಂತ ಮುಂಚೆ ಮೆಣಸಿನಕಾಯಿ ಮಣಕ್ಕೆ ಯಾವ ಧಾರಣೆಯಿತ್ತು?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಈಗ ಯಾವ ಧಾರಣೆಯಿದೆ?

ಶ್ರೀ ಟಿ. ಮರಿಯಪ್ಪನವರು.—ಈಗೇನೂ ವಿಪರೀತ ಕಡಿಮೆಯಾಗಿಲ್ಲವೆಂದು ಹೇಳಬಹುದು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಹತೋಟಿ ಮಾಡಿದ್ದರಿಂದ ಯಾವ ವಿಧವಾದ ಪರಿಣಾಮವೂ ಆಗದಿರುವುದರಿಂದ ಹತೋಟಿ ಅನಾವಶ್ಯಕವೆಂದು ಅರ್ಥವಾಗುವುದಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಹತೋಟಿ ವಿಧಿಸಿದ್ದರೆ ಧಾರಣೆ ವಿಪರೀತವಾಗಿ ಏರುತ್ತಿತ್ತು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಧಾರಣೆ ಗೊತ್ತಿಲ್ಲದೇಯಿರುವುದರಿಂದ ಈ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಮೈಸೂರು ಜಿಲ್ಲಾ ಪುಡ್ ಕಾರ್ಪೊರೇಷನ್‌ನಿಂದ ಈ ಹತ್ತೋ ಟಯನ್ನು ಹಾಕಬೇಕೆಂದು ಅರಿಕೆ ಬಂದಿರಲಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಕೆ. ಪುಟ್ಟಸ್ವಾಮಿಯವರು.—ಹತ್ತೋಟಿ ಹಾಕಿದ ಮೇಲೆ ಬೆಲೆ ಇಳಿದಿದೆಯೆಂಬುದು ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ವಿಶೇಷವಾಗಿ ಇಳಿದಿಲ್ಲ.

ಶ್ರೀ ಎಂ. ಎರ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಮೆಣಸಿನಕಾಯಿ ಬೆಳೆಯತಕ್ಕವರಿಂದ ಈ ಹತ್ತೋಟಿ ಹಾಕಬೇಕೆಂದು ಅರಿಕೆ ಬಂದಿತ್ತೇ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಂ. ಎಸ್. ಜೋಯಿನರು (ಮೈಸೂರು ಜಿಲ್ಲೆ).—ಮೆಣಸಿನಕಾಯಿ ಖಾರದ ಪದಾರ್ಥವಾಗಿರುವುದರಿಂದ ಇದನ್ನು ದೇಶದ ಹೊರಕ್ಕೆ ಕಳುಹಿಸುವುದು ಉತ್ತಮವಲ್ಲವೆ (ನಗು)?

(ಉತ್ತರ ಬಿಲ್ಲ.)

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ಹತ್ತೋಟಿ ಆಜ್ಞೆ ಜಾರಿಗೆ ಬಂದು ಆರು ತಿಂಗಳ ಕಾಲವಾಯಿತೆ. ಇದು ಜಾರಿಗೆ ಬಂದ ಮೇಲೆ ಯಾರಿಗಾದರೂ ರಪ್ತು ಮಾಡಲು ಲೈಸೆನ್ಸ್ ಕೊಡಲಾಗಿದೆಯೆ?

ಶ್ರೀ ಟಿ. ಮರಿಯಪ್ಪನವರು.—ನನಗೆ ತಿಳಿದಮಟ್ಟಿಗೆ ಯಾರಿಗೂ ಕೊಟ್ಟಿಲ್ಲ. ಸ್ವಲ್ಪ ಪ್ರಮಾಣಕ್ಕೆ ಕೊಟ್ಟಿದ್ದರೂ ಇರಬಹುದು. ಹೆಚ್ಚಿನ ಪ್ರಮಾಣಕ್ಕೆ ಕೊಟ್ಟಿಲ್ಲವೆಂದು ಕಾಣುತ್ತದೆ. ನೋಟೀಸ್ ಕೊಟ್ಟರೆ ಖಚಿತವಾಗಿ ಹೇಳುತ್ತೇನೆ.

---

*Q.—142. **Sri T. MADIAH GOWDA** (Bangalore District—General).—

Will the Government be pleased to state:—

(*a*) whether a place has been selected for the construction of the Agricultural College;

(*b*) the amount sanctioned for (i) construction and (ii) equipment of the College?

A.—**Sri T. MARIAPPA** (Home Minister).—

(*a*) No. (The committee which has been constituted for this purpose is examining the question and its report is awaited.)

(*b*) Does not arise in view of the answer to (*a*).

ಶ್ರೀ ಟಿ. ಮಾದಯ್ಯಗೌಡರು.—ಸಮಿತಿ ಏರ್ಪಾಡಾಗಿದೆ ಎಂದು ಹೇಳಿದ್ದೀರಿ. ಅವರು ತಮ್ಮ ವರದಿಯನ್ನು ಕಳುಹಿಸುವುದಕ್ಕೆ ಇನ್ನು ಎಷ್ಟು ದಿನ ಬೇಕು ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೆ?

ಶ್ರೀ ಟಿ. ಮರಿಯಪ್ಪನವರು.—ಬಹಳ ಬೇಗ ಕಳುಹಿಸಬೇಕೆಂದು ತಿಳಿಸಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು,—ಅವರು ವರದಿ ಕಳುಹಿಸುವವರೆಗೂ ಕಟ್ಟಡಕ್ಕೆ ಬೇಕಾದ ಹಣ ಮತ್ತು ಎಕ್ವಿಪ್‌ಮೆಂಟ್‌ಗೆ ಬೇಕಾದ ಹಣ ಒದಗಿಸಬಾರದು ಎಂದು ಸರ್ಕಾರಿದವರ ಅಭಿಪ್ರಾಯವೆ?

ಶ್ರೀ ಟಿ. ಮರಿಯಪ್ಪನವರು.—ಅವರು ಅಂತ್ಯ ತೀರ್ಮಾನ ಮಾಡುವುದರೊಳಗೇ ಇದನ್ನು ಮಾಡುವುದು ಅಷ್ಟು ಸೂಕ್ತವಲ್ಲವೆಂದು ಸರ್ಕಾರದವರ ಭಾವನೆ.

ಶ್ರೀ ಟಿ. ಮಾದಯ್ಯಗೌಡರು.—ಹಣ ಒದಗಿಸದೇ ಇದ್ದ ಪಕ್ಷದಲ್ಲಿ ಒಂದು ವೇಳೆ ಈಗಲೇ ಅವರು ವರದಿಯನ್ನು ಕಳುಹಿಸಿದರೂ ಕೂಡ ಒಂದು ವರ್ಷಕ್ಕೆ ಮೇಲ್ಪಟ್ಟು ತಾವು ಆ ಕೆಲಸವನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಭಾವಿಸೋಣವೆ?

ಶ್ರೀ ಟಿ. ಮರಿಯಪ್ಪನವರು.—ಹಾಗೆ ಹೇಳುವುದಕ್ಕಾಗುವುದಿಲ್ಲ. ಯಾವಾಗ ಸರ್ಕಾರದವರು ಮನಸ್ಸು ಮಾಡಿದರೆ ಆಗ ಹಣ ಒದಗಿಸಬಲ್ಲರು.

ಶ್ರೀ ಟಿ. ಮಾದಯ್ಯಗೌಡರು.—ಈಗಿರತಕ್ಕ ವ್ಯವಸಾಯದ ಕಾರ್ಯಕ್ಕೆ ಸರಿಯಾದ ಕಟ್ಟಡವಿಲ್ಲದೆ, ಸರಿಯಾದ ವ್ಯವಸ್ಥೆಯಿಲ್ಲದೆ, ಅವ್ಯವಸ್ಥೆಯಲ್ಲದೆ ಎಂದು ಭಾವಿಸೋಣವೆ?

ಶ್ರೀ ಟಿ. ಮರಿಯಪ್ಪನವರು.—ಅವ್ಯವಸ್ಥೆಯಲ್ಲಿ ಇಲ್ಲ; ಸುಂದರವಾದ ಕಟ್ಟಡ ಇಲ್ಲವೆಂದು ಹೇಳಬಹುದು.

ಶ್ರೀ ಟಿ. ಮಾದಯ್ಯಗೌಡರು.—ಈಗಿರತಕ್ಕ ಕಟ್ಟಡದಲ್ಲಿ ವಿದ್ಯಾರ್ಥಿಗಳು ಕುಳಿತುಕೊಂಡು ಪಾಠ ಪ್ರವಚನ ನಡೆಸುವುದಕ್ಕೆ ಬಹಳ ದುಸ್ತರವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಸ್ವಲ್ಪ ಅನಾನುಕೂಲಗಳು ಇವೆ. ಅವ್ಯವಸ್ಥೆಯಾಗಿದೆ, ಕೆಲಸಕಾರ್ಯ ನಡೆಯುವುದಿಲ್ಲ ಎಂಬುದನ್ನು ಒಪ್ಪುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಈ ಸಮಿತಿಯನ್ನು ಯಾವಾಗ ನೇಮಕ ಫಾಡಿದಿರಿ?

ಶ್ರೀ ಟಿ. ಮರಿಯಪ್ಪನವರು.—ಸುಮಾರು ಒಂದೂವರೆ ವರ್ಷ ಆಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅವರು ವರದಿಯನ್ನು ಇಷ್ಟೇ ದಿನದಲ್ಲಿ ಕಳುಹಿಸಬೇಕೆಂದು ಏಧಾಯಕ ವೇನಾದರೂ ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ಇಷ್ಟೇ ದಿನದಲ್ಲಿ ಕಳುಹಿಸಬೇಕೆಂದು ಇದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಈ ಸಮಿತಿಯವರು ಇಂಡಿಯಾದೇಶದಲ್ಲಿ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಅಲ್ಲಿ ವ್ಯವಸಾಯದ ಕಾರ್ಯಕ್ರಮಗಳು ಯಾವ ಯಾವ ಸನ್ನಿವೇಶದಲ್ಲಿ ಇವೆ ಎಂಬುದನ್ನು ಪರೀಕ್ಷೆಮಾಡಿಕೊಂಡು ಬಂದಮ್ಮದ ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ನಮಗಿನ್ನೂ ಅವರು ತಾತ್ಕಾಲಿಕ ವರದಿಯನ್ನು ಕಳುಹಿಸಿಲ್ಲ. ಆದರೂ ನಮ್ಮ ಗಮನಕ್ಕೆ ಏನೋ ಬಂದಿದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಯಾವ ಯಾವ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದಾರೆ ಎಂಬುದು ಗೊತ್ತೆ?

ಶ್ರೀ ಟಿ. ಮರಿಯಪ್ಪನವರು.—ಅಫಿಷಿಯರ್ ಆಗಿ ಗೊತ್ತಿಲ್ಲ. ಕೊಯಮುತ್ತೂರಿಗೆ ಹೋಗಿದ್ದರು ಎಂದು ತಿಳಿದು ಬಂದಿದೆ.